**ಪಿ.ಡಬ್ಲ್ಯೂ-1**

**ದಿನಾಂಕ 16-06-2026 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :ಶ್ರೀ.ಎಸ್.ಪಿ.ವಿ ವಕೀಲರಿಂದ ವಾದಿ ಪರವಾಗಿ**

ನಾನು ಈ ಕೇಸಿನಲ್ಲಿ ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರ ಸಲ್ಲಿಸಿದ್ದು, ಅದನ್ನು ತಯಾರಿಸಲು ಗೌರವಾನ್ವಿತ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯಗಳು ಸರಿಯಾಗಿರುತ್ತವೆ ಮತ್ತು ಸತ್ಯವಾಗಿರುತ್ತವೆ ಎಂದು ಈ ಮೂಲಕ ಪ್ರಮಾಣಿಸಿಕರಿಸುತ್ತೇನೆ.

ನಾನು ಈಗ ಸರ್ವೆ ನಂ.173/1, 232/4, 232/5 ಗಳ 2023-24 ರ ಪಹಣಿ ಪತ್ರಿಕೆಗಳನ್ನು ಹಾಜರಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1 ರಿಂದ ನಿಪಿ-3 ಎಂದು ಗುರುತಿಸಲಾಯಿತು. ನಾನು ಈಗ ದಿಃ01.09.1982 ರ ಮುಟೇಶನ ಪ್ರತಿಯ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು. ಮುಟೇಶನ ಎಂಟ್ರಿ ಸಂಖ್ಯೆ 1998 ರ ದೃಢೀಕೃತ ನಕಲು ಹಾಜರಪಡಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ದಿಃ02.04.2024 ರಂದು ಪ್ರತಿವಾದಿ-1 ಮತ್ತು ಪ್ರತಿವಾದಿ-3 ರವರು ಬರೆದುಕೊಟ್ಟ ಕ್ರಯದಸ್ತು ಅದಕ್ಕೆ ಪ್ರತಿವಾದಿ-2, ಪ್ರತಿವಾದಿ-4 ರಿಂದ ಪ್ರತಿವಾದಿ-6 ರವರು ಒಪ್ಪಿಗೆ ಸಾಕ್ಷಿದಾರರಾಗಿದ್ದು, ಸದರಿ ಕ್ರಯದಸ್ತನ್ನು ಪ್ರತಿವಾದಿ-7 ರವರಿಗೆ ಬರೆದುಕೊಟ್ಟಿದ್ದು, ಅದನ್ನು ಹಾಜರಪಡಿಸಿದ್ದು ಅದನ್ನು ನಿಪಿ-6 ಎಂದು ಗುರುತಿಲಸಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ